ಶ್ರೀ ಗೋಪಾಲ ಪೂಜಾರಿ.ಕೆ.(ಬೈಂದೂರು): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಶ್ರಯ ಯೋಜನೆಯ ಹೆಚ್ಚುವರಿ ಮನೆ 1998-99ನೇ ಸಾಲಿನಲ್ಲಿ ಫಲಾನುಭವಿಗಳಿಗೆ ಹಣ ಪಾವತಿಯಾಗುತ್ತಿಲ್ಲ ಏಕೆ?

ಆ) ಈ ಬಗ್ಗೆ ಜಿಲ್ಲಾಧಿಕಾರಿಯವರು ಉಡುಪಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರು ತಾಲ್ಲೂಕು ಪಂಚಾಯಿತಿ ಇವರು 1998-99ನೇ ಸಾಲಿನ ಆಶ್ರಯ ಹೆಚ್ಚುವರಿ ಮನೆಗಳಿಗೆ ಹಣ ಪಾವತಿ ಮಾಡದಂತೆ ಏಕೆ ಆದೇಶ ಮಾಡಿದ್ದಾರೆ?

ಇ) ಈ ವಿಚಾರದಲ್ಲಿ ಸರ್ಕಾರ ಕೈಗೊಳ್ಳುವ ಕ್ರಮವನ್ನು ತಿಳಿಸುವುದು?

ಶ್ರೀ ಬಿ.ಮರುಳಾ ಇಸ್ಲಾಂ (ವಸತಿ ಸಚಿವರು):

ಅ) 1998-99ನೇ ಸಾಲಿನ ಹೆಚ್ಚುವರಿ ಮನೆಗಳಿಗೆ ಸರ್ಕಾರ ಇಲ್ಲಿಯವರೆಗೆ 3377.25 ಲಕ್ಷ ಸಹಾಯಧನ ಹಾಗೂ 3371.48 ಲಕ್ಷ ಹುಡ್ಕೋ ಸಾಲವನ್ನು ಎಲ್ಲಾ 27 ಜಿಲ್ಲೆಗಳಿಗೂ ಬಿಡುಗಡೆ ಮಾಡಲಾಗಿದೆ.

ಆ) ಯಾವುದೇ ಆದೇಶ ಮಾಡಿರುವುದಿಲ್ಲ.

ಇ) ಪ್ರಶ್ನೆ (ಅ) ಮತ್ತು (ಆ)ನಲ್ಲಿ ನೀಡಿರುವ ಉತ್ತರದಿಂದ ಉದ್ಭವಿಸುವುದಿಲ್ಲ.

ಉಡುಪಿ ಜಿಲ್ಲೆಯಲ್ಲಿ ಅತೀವೃಷ್ಟಿಯಿಂದ ಆದ ಹಾನಿ.

2519(2831)

ಶ್ರೀ ಗೋಪಾಲ ಪೂಜಾರಿ.ಕೆ.(ಬೈಂದೂರು): ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಾದ್ಯಂತ ಅತಿವೃಷ್ಟಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಈ ಅತಿವೃಷ್ಟಿಯಲ್ಲಿ ಭಾಗಶಃ ನಾಶವಾದ ಮನೆಗಳು ಎಷ್ಟು?

ಇ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಹೌದು.

ಆ) ಒಟ್ಟು 1290 ಮನೆಗಳು ಅತಿವೃಷ್ಟಿಯಿಂದಾಗಿ ಭಾಗಶಃ ಹಾನಿಗೊಂಡಿರುತ್ತವೆ.

ಇ) ಭಾಗಶಃ ಹಾನಿಗೊಂಡ 1290 ಮನೆಗಳಿಗೆ ಒಟ್ಟು ರೂ. 18.18 ಲಕ್ಷ ರೂ.ಗಳ ಪರಿಹಾರವನ್ನು ವಿತರಿಸಲಾಗಿದೆ.

ರಾಜ್ಯದಲ್ಲಿ ಕರ್ನಾಟಕ ಸಹಕಾರಿ ಕುಕ್ಕುಟ ಮಹಾ ಮಂಡಳಿಯ ಕುರಿತು.

2521(2112)

ಶ್ರೀ ಗುರುಸ್ವಾಮಿ ಎ.ಎನ್.(ಚಾಮುಂಡೇಶ್ವರಿ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

ಎ) ರಾಜ್ಯದಲ್ಲಿ ಕರ್ನಾಟಕ ಸಹಕಾರಿ ಕುಕ್ಕುಟ ಮಹಾ ಮಂಡಳಿಯ ಸದಸ್ಯತ್ವ ಹೊಂದಿರುವವರ ಸಂಖ್ಯೆ.

ಬಿ) ಸರ್ಕಾರ ಮತ್ತು ಕುಕ್ಕುಟ ಮಹಾ ಮಂಡಳಿಯು ಕುಕ್ಕುಟ ಅಭಿವೃದ್ಧಿಗಾಗಿ ರಾಜ್ಯದಲ್ಲಿ ಹಮ್ಮಿಕೊಂಡಿರುವ ಕ್ರಮಗಳೇನು?

ಸಿ) ಕುಕ್ಕುಟ ಸಹಕಾರ ಸಂಘಗಳಿಗೆ ಸರ್ಕಾರದಿಂದ ಮತ್ತು ಇತರ ಮೂಲಗಳಿಂದ ಎಷ್ಟು ಹಣ ಮಂಜೂರಾಗಿದೆ.

ಡಿ) ಕುಕ್ಕುಟ ಮಹಾ ಮಂಡಳಿಯು ಹೆಚ್ಚಿನ ಸಂಖ್ಯೆಯಲ್ಲಿ ಪ್ರಾಥಮಿಕ ಕುಕ್ಕುಟ ಸಹಕಾರ ಸಂಘವನ್ನು ಸ್ಥಾಪಿಸಲು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಡಿ.ಕೆ.ಶಿವಕುಮಾರ (ಸಹಕಾರ ಸಚಿವರು):

ಎ) 44 ಪ್ರಾಥಮಿಕ ಕುಕ್ಕುಟ ಸಹಕಾರ ಸಂಘಗಳು ಕರ್ನಾಟಕ ಸಹಕಾರ ಕುಕ್ಕುಟ ಮಹಾ ಮಂಡಳಿಯ ಸದಸ್ಯತ್ವವನ್ನು ಪಡೆದಿರುತ್ತವೆ.

ಬಿ) ಮಹಾ ಮಂಡಳಿಯು ಪ್ರಾದೇಶಿಕ ಕೇಂದ್ರಗಳನ್ನು ಬೆಂಗಳೂರು, ಮೈಸೂರು, ಧಾರವಾಡ, ಬೆಳಗಾಂ ಮತ್ತು ಗುಲ್ಬರ್ಗಾ ನಗರದಲ್ಲಿ ಸ್ಥಾಪಿಸಿರುತ್ತದೆ. ಈ ಕೇಂದ್ರಗಳ ಮೂಲಕ ಗಿರಿರಾಜ ಕೋಳಿ ಮರಿಗಳ ಸರಬರಾಜು ತರಬೇತಿ ಸೌಲಭ್ಯಗಳನ್ನು ಮತ್ತು ಕೋಳಿಗಳಿಗೆ ಬರುವ ಕಾಯಿಲೆಗಳಿಗೆ ಲಸಿಕೆ ಹಾಕುವ ಕಾರ್ಯಕ್ರಮಗಳನ್ನು ಹೊಂದಿರುತ್ತದೆ.